ಸಾಮಾನ್ಯವಾಗಿ ಯಾವ ಮನೆಯವರೂ ತಂತಮ್ಮ ಮನೆಗೆ ದಕ್ಷಿಣಕ್ಕೆ ಬಾಗಿಲು ಇಡುವುದಿಲ್ಲ. ಆದರೆ ಕೃಷ್ಣಶಾಸ್ತ್ರಿಗಳ ಗುಡಿಸಲಿಗೆ ಬಾಗಿಲೇ ಇಲ್ಲದೆ ಅದರ ಮುಖ ದಕ್ಷಿಣಕ್ಕೇ ಇತ್ತು. ಗುಡಿಸಲ ಒಳಭಾಗದ ಗೋಡೆಯಲ್ಲಿ ಒಂದು ಅಡಿ ಉದ್ದಗಲದ ಗೂಡು. ಅದರೊಳಗೆ ರಮಣಮಹರ್ಷಿಗಳ ಫೋಟೊ. ಗುಡಿಸಲು ಪ್ರವೇಶಿಸುವಲ್ಲಿ ತಲೆ ತಗ್ಗಿಸಿ ನುಗ್ಗಬೇಕು. ಕೃಷ್ಣಶಾಸ್ತ್ರಿಗಳು ಈ ಗುಡಿಸಲಿನಲ್ಲಿ ಸರಿಸುಮಾರು ಮೂವತ್ತು ವರ್ಷ ವಾಸಮಾಡಿದ್ದರು. ಗುಡಿಸಲ ಒಳಭಾಗದಲ್ಲಿ ರಮಣಮಹರ್ಷಿಗಳ ಚಿತ್ರಪಟ, ಎರಡು ಚಾಪೆ ಬಿಟ್ಟರೆ ಉಳಿದಂತೆ ಒಂದು ಸೋರೆ ಬುರುಡೆಯ ಏಕತಾರಿ ಇತ್ತು. ಅವರು ಅದನ್ನು ನುಡಿಸಿಕೊಂಡು ತತ್ವಪದಗಳನ್ನು ಹಾಡುತ್ತಿದ್ದರೆಂದು ಅವರಿವರಿಂದ ನಾನು ಕೇಳಿದ್ದೆ. ಆದರೆ ನಾನು ಇರುವಲ್ಲಿ ಮಾತ್ರ ಅವರು ಒಂದು ದಿನವೂ ಹಾಡಿರಲಿಲ್ಲ. ರಾಮಕೃಷ್ಣ ಮತ್ತು ನಾನು ಒಂದು ದಿನ ಬೆಳಗೆರೆಗೆ ಹೋದಾಗ ಕೃಷ್ಣಶಾಸ್ತ್ರಿಗಳನ್ನು ಒಂದು ಪದ ಹಾಡುವಂತೆ ಕೋರಿದೆವು. ಯಾವ ಸಂಕೊಚ ಭಾವವೂ ಇಲ್ಲದೆ ಸಂಜೆಯ ಆ ಹೊತ್ತಿನಲ್ಲಿ ಏಕತಾರಿ ನುಡಿಸಿ ಕಣ್ಣುಮುಚ್ಚಿ,

ಯಾವೂರಿಂದ ಬಂದೆ ? ಮತ್ತೆಲ್ಲಿಗೆ ಪಯಣ ಮುಂದೆ
ಏನ ಕಂಡೆ ಹಿಂದೆ ? ಇಲ್ಲೇನ ಬಯಸಿ ನಿಂದೆ ?
ಏನೇನ ತಂದೆ ? ನೀ ಹೇಳದೇ ಹೋದರೆ ಚಂದೆ ?
ಗಡಿಬಿಡಿಗೊಂಡಂತಿರುವೆ, ಏಕೋ ಗಾಬರಿಯಾದಂತಿರುವೆ
ಅಡಿಗಡಿಗೆಡಹುತಲಿರುವೆ, ನೀ ಗಡಗಡ ನಡುಗುತಲಿರುವೆ...

ತತ್ವಪದ ಹಾಡಿದರು. ಈ ಪದ ಯಾರದು ಎಂದು ಕೇಳಿದ್ದಕ್ಕೆ ಯಾರದೋ ಎಂದರು. ಆಮೇಲೆ ಅದು ಅವರದೇ ಎಂದು ಗೊತ್ತಾಯಿತು. ಸ್ವಲ್ಪ ದಿನಗಳ ನಂತರ ಆ ಏಕತಾರಿ ಕಾಣದಂತಾಯಿತು.

ಬೆಳಗೆರೆಯವರು ಎರಡು ನಾಯಿಗಳನ್ನು ಸಾಕಿದ್ದರು. ಅವರ ಮೇಲೆ ಅವುಗಳ ಪ್ರೀತಿ ಅಸಾಧಾರಣ. ನಾಲ್ಕೈದು ದಿನಗಳ ಕಾಲ ಸ್ಥಳ ಬಿಟ್ಟು ಹೋಗಿ ಬಂದರೆ ಅವೆರಡೂ ನಾಯಿಗಳು ತೋಟ ದಾಟಿ ಬಂದು ರಸ್ತೆಯಲ್ಲೇ ಅವರನ್ನು ಸ್ವಾಗತಿಸುತ್ತಿದ್ದವು. ನೀನು ಇಷ್ಟುದಿನ ನಮ್ಮನ್ನು ಅದೆಲ್ಲಿ ಬಿಟ್ಟುಹೋಗಿದ್ದೆ ಎಂಬಂತೆ ಅವರ ಮೈ, ಕೈಯನ್ನು ನೆಕ್ಕುತ್ತಾ ಆಕ್ಷೇಪಣೆಯ ದನಿಯಲ್ಲಿ ಜೋರು ಉಸಿರಿನಲ್ಲಿ ಕನೆಯುತ್ತಿದ್ದವು. ಒಂದರ ಮೇಲೆ ಇನ್ನೊಂದು ನೆಗೆನೆಗೆದು ಅವರನ್ನು ತಬ್ಬಿಕೊಳ್ಳುತ್ತಿದ್ದವು. ಶಾಸ್ತ್ರಿಗಳ ಶುದ್ಧಬಿಳಿಯ ಜುಬ್ಬ ನಾಯಿ ಕಾಲುಗಳಿಗೆ ಮೆತ್ತಿದ್ದ ಕೆಂಪು ಮಣ್ಣಿನ ದೂಳಿನಿಂದ ಪಟ್ಟೆಪಟ್ಟೆಯೇಳುತ್ತಿತ್ತು. ಶಾಸ್ತ್ರಿಗಳು ಬಿಡ್ರೊ ಸಾಕು, ಬಿಡ್ರೊ ಸಾಕು ಎಂದರೂ ಅವು ಸಾಕಾಗುವಷ್ಟು ಅವರನ್ನು ಅಪ್ಪಿ ಮೈಕೈಯ್ಯನ್ನೆಲ್ಲ ಮೂಸಿ ನಂತರವೇ ಬಿಡುತ್ತಿದ್ದವು. ಈ ಅಗಲಿಕೆಯ ವಿರಹವೇದನೆ ತಹಬಂದಿಗೆ ಬರಲು ಹತ್ತಿಪ್ಪತ್ತು ನಿಮಿಷವಾದರೂ ಬೇಕಾಗುತ್ತಿತ್ತು.

★★★

ಶನಿವಾರ ಸಂಜೆ ಕೃಷ್ಣಶಾಸ್ತ್ರಿಗಳ ಗುಡಿಸಲು ಮುಟ್ಟಿದೆ. ಮೊದಲ ಬಾರಿಗೆ ನನ್ನನ್ನು ಕಂಡ ಅವರ ನಾಯಿಗಳು ಗದ್ದಲ ಮಾಡದೆ ಕೊಂಚ ದೂರದಿಂದಲೇ ನನ್ನ ವಾಸನೆ ಹಿಡಿದು ಸುಮ್ಮನಾದವು. ರಾಗಿ ಪೈರಿಗೆ ನೀರು ತಿರಿಯುತ್ತಿದ್ದ ಶಾಸ್ತ್ರಿಗಳು ಕೈಕಾಲು ತೊಳೆದುಕೊಂಡು ನನ್ನತ್ತ ಬಂದರು. ಗುಡಿಸಿಲ ಒಳಗಿನ ಚಾಪೆಗೆ ಇಬ್ಬರೂ ಕುಳಿತೆವು. ನಾವು ವಾಸ ಮಾಡುತ್ತಿರುವುದು ಈ ಅಡವಿಯಲ್ಲಿ. ನಿಮಗೆ ಇಲ್ಲಿವರೆಗೆ ಬರುವುದು ದುಸ್ತರವಾಯಿತೇನೋ ಎಂದರು. ನಾನು ಬೆಳಗೆರೆಯ ಸುತ್ತಿನ ಪ್ರಾಕೃತಿಕ ವಿವರಗಳನ್ನೆಲ್ಲ ಹೇಳಿದೆ. ಬಸ್ಸು ಇಳಿದಲ್ಲೇ ವಿಸ್ತಾರವಾದ ಬೆಳಗೆರೆಯ ಕೆರೆ ಇದ್ದಿತಲ್ಲ. ಅದರ ತಡಿಯಲ್ಲೇ ರಂಗನಾಥಸ್ವಾಮಿಯ ಗುಡಿ, ಆಮೇಲೆ ಈ